

# ರೌಡಿ ಬೇಬಿ ಬರ್ತಿದಾಳೆ, ಸೈಡು ಬಿಡಿ!

**ಫೈಲಟ್ ಆಗಿ ಹಾರಾಡುವ ಕನಸು ಕಟ್ಟಿದ್ದ ದಿವ್ಯಾ ರಾವ್ ಈಗ ಬಣ್ಣದ ಲೋಕದಲ್ಲಿ ಚಿಟ್ಟೆಯಾಗುವ ಕನಸಿಗೆ ರೆಕ್ಕೆ ಕಟ್ಟಿದ್ದಾರೆ. ವೃತ್ತಿಬದುಕಿನ ಆರಂಭಿಕ ಹಂತದಲ್ಲಿಯೇ ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ನಟಿಸುವ ಅವಕಾಶ ಗಿಟ್ಟಿಸಿಕೊಳ್ಳುತ್ತಿರುವ ಅವರು ಪವರ್‌ಫುಲ್ ಪಾತ್ರಗಳನ್ನು ಮಾತ್ರವೇ ಒಪ್ಪಿಕೊಳ್ಳುವುದಂತೆ.**

■ **ಪದ್ಮನಾಭ ಭಟ್**

ಚಿಕ್ಕಂದಿನಲ್ಲಿಯೇ ಆ ಹುಡುಗಿಗೆ ವೇದಿಕೆ ಎಂದರೆ ಇಷ್ಟ. ಶಾಲಾದಿನಗಳಲ್ಲಿಯೇ ಹಲವು ನಾಟಕಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡಿದ್ದಳು. ಆದರೆ ಮುಂದೆ ನಟಿಯಾಗಬೇಕು ಎಂದೇನೂ ಕನಸು ಕಟ್ಟಿರಲಿಲ್ಲ. ಬಾಲ್ಯದಲ್ಲಿ ಆಕಾಶದಲ್ಲಿ ಹಾರಾಡುವ ವಿಮಾನಗಳನ್ನು ಎವೆಯಿಕ್ಕದೇ ನೋಡುತ್ತಿದ್ದ ಅವಳ ಕಣ್ಣುಗಳಲ್ಲಿ ತಾನೂ ಹಾಗೇ ಹಾರಬೇಕು ಎಂಬ ಕನಸು ಮಿನುಗುತ್ತಿತ್ತು. ಅದಕ್ಕಾಗಿಯೇ ಫೈಲಟ್ ಆಗಬೇಕು ಎಂದು ನಿಶ್ಚಯವನ್ನೂ ಮಾಡಿದ್ದಳು. ಆದರೆ ಕಾಲೇಜು ದಿನಗಳಲ್ಲಿ ಬದುಕಿನ ದಾರಿ ಬೇರೆಯದೇ ತಿರುವು ಪಡೆದುಕೊಂಡಿತ್ತು. ತಾರಾಲೋಕದಲ್ಲಿ ಹಾರಾಡುವ ಕನಸು ಕಂಡಿದ್ದ ಹುಡುಗಿ ಸ್ವತಃ ತಾರೆಯಾಗುವ ದಾರಿಯಲ್ಲಿ ನಡೆಯಲು ಶುರುಮಾಡಿದಳು.

– ಇದು ದಿವ್ಯಾ ರಾವ್ ಎಂಬ ಬೆಂಗಳೂರಿನ ಹುಡುಗಿಯ ಬದುಕ ನಕ್ಷೆ. ಪಿಯುಸಿ ಓದುತ್ತಿದ್ದಾಗ ಸ್ನೇಹಿತೆಯರು 'ನಿನ್ನ ಹೈಟ್ ಚೆನ್ನಾಗಿದೆ. ನೋಡೋಕೂ ಚೆನ್ನಾಗಿದ್ದೀಯಾ. ಮಾಡೆಲ್ ಆಗೋಕೆ ಟ್ರೈ ಮಾಡು' ಎಂದು ಮಾತಿನ ಮಧ್ಯೆ ಹೇಳುತ್ತಿದ್ದುದು ದಿವ್ಯಾ ಮನಸ್ಸಿನಲ್ಲಿ ಹೊಸ ದಾರಿಯನ್ನೇ ತೆರೆಯಿತು. ಅಮ್ಮನೂ ಮಗಳ ಈ ಕನಸಿಗೆ ಬೆಂಬಲವಾಗಿ ನಿಂತರು. ಪರಿಣಾಮವಾಗಿ 2017ರಲ್ಲಿ 'ಮಿಸ್ ಸೌತ್ ಇಂಡಿಯಾ' ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಹಲವು ಸೌಂದರ್ಯಸ್ಪರ್ಧೆಗಳಲ್ಲಿ, ಜಾಹೀರಾತುಗಳಲ್ಲಿ ಕಾಣಿಸಿಕೊಂಡರು.

'ಮಿಸ್ ಸೌತ್ ಇಂಡಿಯಾ' ಕಿರೀಟದ ಹೊಳಪು ಗಾಂಧಿನಗರದ ಪಡಸಾಲೆಗೆ ತಲುಪಲು ಹೆಚ್ಚು ಸಮಯ ತಗುಲಲಿಲ್ಲ. 2017ರಲ್ಲಿಯೇ ನರೇಂದ್ರ ಬಾಬು ನಿರ್ದೇಶನದ '#9 ಹಿಲ್ಟನ್ ಹೌಸ್' ಎಂಬ ಹಾರರ್ ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿತು.

'ಮೊದಲ ಸಿನಿಮಾ ಒಪ್ಪಿಕೊಳ್ಳುವಾಗ ನನಗೆ ಸಿನಿಮಾರಂಗದ ಬಗ್ಗೆ ಏನೇನೂ ತಿಳಿದಿರಲಿಲ್ಲ. ಆದರೆ ರಂಗಭೂಮಿಯಲ್ಲಿ ನಟಿಸಿ ಅನುಭವ ಇತ್ತು. ಹಾಗಾಗಿ ಕ್ಯಾಮೆರಾ ಎದುರಿಸುವುದು ಕಷ್ಟ ಅನಿಸಲಿಲ್ಲ. ನಂತರ ಚಿತ್ರರಂಗದ ಬಗ್ಗೆ, ಸಿನಿಮಾಗಳ ಬಗ್ಗೆಯೂ ತಿಳಿದುಕೊಂಡೆ. ಆ ಸಿನಿಮಾದ ನಂತರ ಒಂದಿಷ್ಟು ಗ್ಯಾಪ್ ತೆಗೆದುಕೊಂಡೆ. ಆ ಗ್ಯಾಪ್‌ನಲ್ಲೇ ನನಗೊಂದು ತೆಲುಗು ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿತು' ಎಂದು ತಮ್ಮ ಸಿನಿಮಾ ಪ್ರಯಾಣ ಆರಂಭವಾದ ಬಗೆಯನ್ನು ವಿವರಿಸುತ್ತಾರೆ ದಿವ್ಯಾ.